## ಬಂಡೆಗಲ್ಲು ಒಡೆಯುವ ಯತ್ನ

ವಿದೇಶಿಗನೊಬ್ಬ ಭಾರತದ ಹಳ್ಳಿಗಳನ್ನು ಸುತ್ತಲು ಬಂದಿದ್ದ. ಅವನು ನೋಡಲು ಹೋದ ಹಳ್ಳಿಯೊಂದರ ಕೆರೆಯಲ್ಲಿ ಒಬ್ಬ ಬಂಡೆಗಲ್ಲಿನ ಮೇಲೆ ಕೂತು ತನ್ನ ಚಡ್ಡಿಗಳನ್ನು ಒಗೆದುಕೊಳ್ಳುತ್ತಿದ್ದ. ವಿದೇಶಿಗ ಅಚ್ಚರಿಯಿಂದ ಎಷ್ಟೊ ಹೊತ್ತು ಅವನನ್ನೇ ನೋಡುತ್ತ ನಿಂತ. ಅವನ ಸ್ನೇಹಿತ ಬಂದು, ವಿದೇಶಿಗನಿಗೆ, ‘ಏನು ನೋಡುತ್ತಿದ್ದೀಯ?’ ಎಂದು ಕೇಳಿದಾಗ, ‘ಅಲ್ಲಿ ನೋಡು, ಎಂಥಾ ವಿಸ್ಮಯ... ಆ ಮನುಷ್ಯ ತನ್ನ ಚಡ್ಡಿಯಿಂದ ಬಂಡೆಗಲ್ಲು ಒಡೆಯಲು ಪ್ರಯತ್ನಿಸುತ್ತಿದ್ದಾನೆ...’ ಎಂದ!

**ಎಂ.ಕೆ. ಮಂಜುನಾಥ್**





## ಪರಮೇಶಿ ಸಾಧನೆ

ಪರಮೇಶಿ ಪಿಯುಸಿಯಲ್ಲಿ ಶೇ 98 ಅಂಕ ಗಳಿಸಿ ತಂದೆತಾಯಿಗೆ ಅಚ್ಚರಿ ಮೂಡಿಸಿದ. ತಾಯಿ ಖುಷಿಯಾಗಿ, ‘ನಿನ್ನ ಈ ಸಾಧನೆಯನ್ನು ನಾವು ನಿರೀಕ್ಷಿಸಿರಲಿಲ್ಲ. ಬಾ, ದೇವರಿಗೆ ದೀಪ ಹಚ್ಚು’ ಎಂದಳು. ಪರಮೇಶಿ, ‘ಇದಕ್ಕೆ ದೇವರು ಕಾರಣನಲ್ಲ, ನೀನು ಮತ್ತು ಅಪ್ಪ ಕಾರಣ’ ಎಂದಾಗ ತಾಯಿ ಆಶ್ಚರ್ಯದಿಂದ ‘ಅದು ಹೇಗೆ?’ ಎಂದಳು. ‘ನೀವಿಬ್ಬರೂ ಯಾವಾಗಲೂ ಮೊಬೈಲ್‌ನಲ್ಲಿ ಫೇಸ್‌ಬುಕ್, ವಾಟ್ಸ್‌ಆ್ಯಪ್‌ನಲ್ಲಿ ಮುಳುಗಿ ಹೋಗುತ್ತಿದ್ರಿ. ನನ್ನ ಕೈಗೆ ಮೊಬೈಲೇ ಸಿಗುತ್ತಿರಲಿಲ್ಲ. ಹೀಗಾಗಿ ನಾನು ಅನಿವಾರ್ಯವಾಗಿ ಓದಬೇಕಾಯ್ತು’ ಎಂದ ಪರಮೇಶಿ.

**ಶಂಕರೇಗೌಡ ತುಂಬಕೆರೆ**